



# ಜೇನುಗೂಡಲ್ಲ, ಜೇಡವೂ ಅಲ್ಲ!

ಚಿತ್ರ–ಬರಹ: **ಸುಘೋಷ ಎಸ್. ನಿಗಳೆ**

ಇದು ಜೇನುಗೂಡಾ? ಜೇಡಗಳು ಹೊರಬರುತ್ತಿವೆಯಲ್ಲ! ಬೆಂಗಳೂರಿನ ದಕ್ಷಿಣ ಭಾಗದ ಗೊಲ್ಲಹಳ್ಳಿ – ಆನೆಪಾಳ್ಯದ ಮಾರ್ಗದಲ್ಲಿ ಸಾಗುವಾಗ ಕಂಡ ಈ ದೃಶ್ಯಕ್ಕೆ ಕ್ಷಣಕಾಲ ದಂಗಾದೆ. ಸೂಕ್ಷ್ಮವಾಗಿ ಇದನ್ನು ಗಮನಿಸಿದಾಗ ನೂರಾರು ಜೇಡಗಳು ಒತ್ತೊತ್ತಾಗಿ ಸೇರಿಕೊಂಡಿದ್ದು ಕಂಡುಬಂತು. ಥಟ್ಟನೆ ನೋಡಿದಾಗ ಜೇಡದಂತೆ ಕಾಣುವ, ಜೇಡದಂತೆಯೇ ಚಲಿಸುವ ಇವು ಜೇಡಗಳಲ್ಲ ಎನ್ನುವುದು ಖಚಿತವಾಯಿತು.

ಇವನ್ನು ‘ಹಾರ್ವೆಸ್ಟ್ ಮೆನ್’ ಅಥವಾ ‘ಡ್ಯಾಡಿ ಲಾಂಗ್ ಲೆಗ್’ ಎಂದು ಕರೆಯುತ್ತಾರೆ. ಇದು ಅರ್ಕಿನಾಡ್ (Archinads) ಎಂಬ ಸಂದಿಪಾದಿ ವರ್ಗಕ್ಕೆ ಸೇರಿದ ಕೀಟ. ಪುರಾತನ ಕೀಟವೂ ಹೌದು. ಭೂಮಿಯ ಮೇಲೆ ಖಂಡಗಳು ರೂಪುಗೊಳ್ಳುವ ಮೊದಲು (ಸೂಪರ್ ಕಾಂಟಿನೆಂಟ್), ಹಾರ್ವೆಸ್ಟ್ ಮೆನ್ ಇದ್ದವು. ಖಂಡಗಳು ರೂಪುಗೊಂಡ ಬಳಿಕ ಇವೂ ಹರಿದು ಹಂಚಿಹೋದವು. ಸಾಮಾನ್ಯವಾಗಿ ಇವು ಎಲ್ಲ ಖಂಡಗಳಲ್ಲಿಯೂ ಕಂಡುಬರುತ್ತವೆ.

ಡ್ಯಾಡಿ ಲಾಂಗ್ ಲೆಗ್ ನೂರಾರು ಸಂಖ್ಯೆಯಲ್ಲಿ ಸೇರಿಕೊಂಡು, ಈ ರೀತಿಯ ಎಗ್ರಿಗೇಟ್ ಮಾಡಿಕೊಳ್ಳಲು ಎರಡು ಕಾರಣಗಳಿವೆ. ರಾತ್ರಿ ಬೇಟೆಯಾಡಿ ಹಗಲಿನಲ್ಲಿ ಬೆಚ್ಚಗೆ ಇರಲು ಇದು ಸಹಾಯಕ, ಮತ್ತೊಂದು ಕಾರಣ ಆತ್ಮರಕ್ಷಣೆ. ಈ ಗುಂಪನ್ನು ಸ್ವಲ್ಪ ಮುಟ್ಟಿದರೂ ಸಾಕು, ನೂರಾರು ಸಂಖ್ಯೆಯಲ್ಲಿ ಒಮ್ಮೆಲೇ ಹಾರ್ವೆಸ್ಟ್ ಮೆನ್ ಹೊರಬಂದು ವೈರಿ ಹೌಹಾರುವಂತೆ ಮಾಡುತ್ತವೆ. ಇವು ಜೇಡಗಳಂತೆ ಕಂಡರೂ, ಇವಕ್ಕೆ ಬಲೆ ಕಟ್ಟಲು ಬರುವುದಿಲ್ಲ. ಇವು ವಿಷಕಾರಿಯಲ್ಲ, ಅಪಾಯಕಾರಿಯೂ ಅಲ್ಲ. ಆದರೆ ಇವನ್ನು ಮುಟ್ಟದಿರುವುದೇ ವಾಸಿ.